ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
EXAMINATION SECTION
Confidential Branch, 2nd Floor, Examination Bhavan

Azadi Ka Amrit Mahotsav

Website: www.kud.ac.in
e-mail: confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ-ಗೌಪ್ಯ/2025/ 744 ದಿನಾಂಕ : 11/04/2026

# ಸುತ್ತೋಲೆ

**ವಿಷಯ**:- ಜೂನ್ - 2026ರಲ್ಲಿ ಜರುಗಲಿರುವ ರಾಷ್ಟ್ರೀಯ ಶಿಕ್ಷಣ ನೀತಿ NEP/ Revised NEP ಅಡಿಯಲ್ಲಿ ಬರುವ ಸ್ನಾತಕ ಪದವಿಗಳ 2,4,6 & 8ನೇ ಸೆಮಿಸ್ಟರ್ ಪರೀಕ್ಷಾ ಪೂರ್ವ ತಯಾರಿ ಕುರಿತು.

*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ ಸನ್ 2025-26ನೇ ಶೈಕ್ಷಣಿಕ ಸಾಲಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ NEP/Revised NEP ಅಡಿಯಲ್ಲಿ ಪ್ರವೇಶ ಪಡೆದುಕೊಂಡು ಎಲ್ಲ ಸ್ನಾತಕ ಪದವಿಗಳ 2, 4, 6 & 8ನೇ ಸೆಮಿಸ್ಟರ್‌ನ ಪರೀಕ್ಷೆಗಳು ಜೂನ್ - 2026ರಲ್ಲಿ ಜರುಗಲಿದ್ದು ಸದರ ಪರೀಕ್ಷೆಗಳಿಗೆ ಪೂರ್ವ ತಯಾರಿ ಕುರಿತು ಈ ಕೆಳಗೆ ಸೂಚಿಸಿದ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ ಅದರ ಪ್ರಕಾರ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

1. 2025-26ರಲ್ಲಿ 1, 3, 5 & 7ನೇ ಸೆಮಿಸ್ಟರ್ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು Download ಮಾಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
2. ರಾಷ್ಟ್ರೀಯ ಶಿಕ್ಷಣ ನೀತಿ NEP/Revised NEP ಅಡಿಯಲ್ಲಿ 2025-26ರಲ್ಲಿ 1ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು 2ನೇ ಸೆಮಿಸ್ಟರ್ ತರಗತಿಗೆ, 3ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು 4ನೇ ಸೆಮಿಸ್ಟರ್ ತರಗತಿಗೆ ಹಾಗೂ 5ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು 6ನೇ ಸೆಮಿಸ್ಟರ್ ತರಗತಿಗೆ ಹಾಗೂ 7ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು 8ನೇ ಸೆಮಿಸ್ಟರ್ ತರಗತಿಗಳಿಗೆ ಆಯಾ ಮಹಾವಿದ್ಯಾಲಯದ ಪ್ರಾಚಾರ್ಯರು UUCMS ತಂತ್ರಾಂಶದ ಮುಖಾಂತರ Promote ಮಾಡುವುದು. ಸದರ ಪ್ರಕ್ರಿಯೆಯನ್ನು ದಿನಾಂಕ: 13.04.2026 ರಿಂದ ಪ್ರಾರಂಭಿಸುವದು.
3. Promote ಗೊಂಡ ವಿದ್ಯಾರ್ಥಿಗಳು UUCMS ತಂತ್ರಾಂಶದ ಮುಖಾಂತರ ಕೋರ್ಸು ನೊಂದಣಿ ಮಾಡಿಕೊಳ್ಳುವುದು ಹಾಗೂ ದಿನಾಂಕ:16.04.2026 ಒಳಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.
4. ಕೋರ್ಸು ನೊಂದಣಿಗೊಂಡ ವಿದ್ಯಾರ್ಥಿಗಳನ್ನು ಪ್ರಾಚಾರ್ಯರು UUCMS ತಂತ್ರಾಂಶದ ಮುಖಾಂತರ ಅನುಮೋದನೆಗೊಳಿಸುವುದು ಸದರ ಪ್ರಕ್ರಿಯೆಯನ್ನು ದಿನಾಂಕ: 18.04.2026 ರ ಒಳಗೆ ಪೂರ್ಣಗೊಳಿಸುವುದು.
5. ಕೋರ್ಸು ನೊಂದಣಿಗೊಂಡ ಹಾಗೂ ಪ್ರಾಚಾರ್ಯರಿಂದ UUCMS ತಂತ್ರಾಂಶದ ಮುಖಾಂತರ ಅನುಮೋದನೆಗೊಂಡ ವಿದ್ಯಾರ್ಥಿಗಳು 2 ,4, 6 & 8ನೇ ಸೆಮಿಸ್ಟರ (ರೆಗ್ಯೂಲರ್ / ರಿಪಿಟರ್) ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮುಖಾಂತರ ಭರ್ತಿ ಮಾಡುವುದು.

ಸದರಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗದಿಂದ ಅಧಿಸೂಚನೆಯನ್ನು ಹೊರಡಿಸಲಾಗುವುದು.

6. ರಾಷ್ಟ್ರೀಯ ಶಿಕ್ಷಣ ನೀತಿ NEP/Revised NEP ಅಡಿಯಲ್ಲಿ 2 ,4, 6 & 8ನೇ ಸೆಮಿಸ್ಟರ್‌ನ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಿದ ಹಾಗೂ ಶೇಕಡಾ 75% ರಷ್ಟು ಹಾಜರಾತಿ ಪೂರೈಸಿದ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು Download ಮಾಡಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು. ಪ್ರವೇಶ ಪತ್ರದ ಪ್ರಕ್ರಿಯೆ ಹಿಂಬಾಕಿ ಇದ್ದಲ್ಲಿ ಸದರ ಪ್ರಕ್ರಿಯೆಯನ್ನು ನಿಗದಿಪಡಿಸಿದ ದಿನಾಂಕದೊಳಗಾಗಿ ಪೂರ್ಣಗೊಳಿಸುವುದು.

7. ದಿನಾಂಕ: 21.05.2026ರ ಒಳಗೆ ಪ್ರಾಯೋಗಿಕ ಬ್ಯಾಚ್‌ಗಳನ್ನು UUCMS ತಂತ್ರಾಂಶದ ಮುಖಾಂತರ ರಚಿಸುವುದು.

8. ದಿನಾಂಕ: 25.05.2026 ರಿಂದ ದಿನಾಂಕ: 06.06.2026ರ ಮಧ್ಯದಲ್ಲಿ ಪ್ರತಿ ಬ್ಯಾಚಿಗೆ ಕನಿಷ್ಟ 15 ವಿದ್ಯಾರ್ಥಿಗಳು ಅವಶ್ಯವಿದ್ದಲ್ಲಿ 20 ವಿದ್ಯಾರ್ಥಿಗಳ ಬ್ಯಾಚಗಳನ್ನು ರಚಿಸಿಕೊಂಡು ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸಿ ಪ್ರತಿ ದಿನದ ಪ್ರಾಯೋಗಿಕ ಅಂಕಗಳನ್ನು ಸದರಿ ದಿನದಂದು ತಪ್ಪದೇ UUCMS ತಂತ್ರಾಂಶದಲ್ಲಿ ನಮೂದಿಸುವುದು.

9. ವಿದ್ಯಾಮಂಡಳ ವಿಭಾಗದಿಂದ ಹೊರಡಿಸಲಾದ ಅಧಿಸೂಚನೆ ಕ್ರಮ ಸಂಖ್ಯೆ.ನಂ. ಕೆಯು/ ವಿದ್ಯಾಮಂಡಳ(ಎಸ್&ಟಿ)/ ಎಸ್‌ಎಸ್‌ಎಲ್/ 450/ 2024-25/ 274 ದಿನಾಂಕ:18.06.2024 ರಲ್ಲಿ ಹೊರಡಿಸಿದ ರಾಷ್ಟ್ರೀಯ ಶಿಕ್ಷಣ ನೀತಿ ಸ್ನಾತಕ ಪದವಿ ತರಗತಿಗಳಿಗೆ ***Internship/Project Work/Field Work/Assesment*** ಮಾರ್ಗಸೂಚಿಗಳ ಪ್ರಕಾರ ***Assesment Report***ನ್ನು ಕೈ ಬರಹ (Hand written) ಮೂಲಕ ಸಲ್ಲಿಸಲು ತಿಳಿಸಲಾಗಿದೆ.

ಕುಲಸಚಿವರು(ಮೌಲ್ಯಮಾಪನ)

ಗೆ,

ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳು.

**<u>ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>**

1. ಡಾ. ಗುರುರಾಜ ಹಡಗಲಿ, ನಿರ್ದೇಶಕರು,ಯು.ಯು.ಸಿ.ಎಮ್.ಎಸ್. ಘಟಕ, ಕ.ವಿ.ವಿ. ಧಾರವಾಡ.
2. ಸಿಸ್ಟಮ್ ಅನಾಲಿಸ್ಟ್, ಗಣಕಕೇಂದ್ರ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
3. ಉಪಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
4. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ)/ ಇವರ ಆಪ್ತಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಐಟಿ ವಿಭಾಗ, ಕವಿವಿ ಸದರ ಸುತ್ತೋಲೆಯನ್ನು ಕವಿವಿ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.